ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

1887ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 951.

ಚಿಕ್ಕಬಳ್ಳಾಪುರದ ಕಸಬೆಯಲ್ಲಿದ್ದು ಮೃತಪಟ್ಟ ವೆಂಗಟರಡ್ಡಿಯ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಚಿಕ್ಕಬಳ್ಳಾಪುರದಲ್ಲಿರುವ ಬಯ್ಯಮ್ಮ, ಮೃತಪಟ್ಟ ಸದರೀ ವೆಂಗಟರಡ್ಡಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಚಿಕ್ಕಬಳ್ಳಾಪುರ ಸ್ಥಳದ ಬಯ್ಯಮ್ಮನು ಸದರೀ ವಾಸಸ್ಥನಾಗಿ ಮೃತಪಟ್ಟ ವೆಂಗಟರಡ್ಡಿಯ ಜಿಂದಗೀ ಬಗ್ಗಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಬಯ್ಯಮ್ಮನ ಅರ್ಜೀಯನ್ನು 1887ನೇ ಇಸವಿ ನವೆಂಬರ್ ತಿಂಗಳು ತಾರೀಖು 18ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀಸಲಾಗುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಗಟರಡ್ಡಿಯ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಡೆ.

1887ನೇ ಇಸವಿ ಅಕ್ಟೋಬರ್ ತಿಂಗಳು 26ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದ್ದೆ.

ದಿವಾಳೀಯಾದ ಡಿಕ್ರೀ ದೇಣೇದಾರ ಪಾವಗಡ ತಾಲ್ಲೂಕು ರಂಗಸಮುದ್ರದಲ್ಲಿ ಯಿರತಕ್ಕ ಗರುಡಾ ವುರಫ್ ತಿಪ್ಪಯ್ಯನ ವಿಷಯದಲ್ಲಿ—

ಸ್ ೧೮೮೭ನೇ ಇಸವಿ ದಿವಾಳೀ ಕೇಸ್ ನಂಬರ್ 467.

ಹುಕ್ಕುಂ.

ಮೇಲ್ಕಂಡ ತಿಪ್ಪಯ್ಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜಿಯವರಾದ ಮೆ|| ಸಿ. ಕೈಸ್ ಸಾಹೇಬರವರ ರೂಬರೂ ಅರ್ಜೀದಾರನಾದ ತಿಪ್ಪಯ್ಯನ ಪರವಾಗಿ ಮೆ|| ಅಡ್ವೊಕೇಟ್ ನರಸುಹ್ಮಯ್ಯಂಗಾರ್‌ನ್ನೂ ಮತ್ತು ಸದರೀಯವನ ಲೇಣೇದಾರ್‌ರಾದ 1ನೇಯವರ ತರಫ್ ಅಡ್ವೊಕೇಟ್ ಮೆ|| ಕೆ. ಶ್ರೀನಿವಾಸಯ್ಯಂಗಾರ್ಯ್‌ರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ,—

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಗರುಡ ವುರಫ್ ತಿಪ್ಪಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳೀಯಾದವನ್ನು ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗೀರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ ದಾರೀಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ ೧೮೮೭ನೇ ಇಸವಿ ಆಗಸ್ಟು 8ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಹೊಂಬಳಿಗೆ.	ಯಾವಾಗ ದೇಣೇ ನೀಡಿದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ.	ಷರಾ.
1	ಪಾವಗಡ ತಾಲ್ಲೂಕು ರಂಗಸಮುದ್ರದಲ್ಲಿರತಕ್ಕ ತಿಮ್ಮಣ್ಣ ಶಾಸ್ತ್ರಿ	380 0 0 100 0 0 117—7—6	. . . . . .	ಡಿಕರೀ ಬಾಬತು. ಪತ್ರದ ಬಾಬತು. ಕಂದಾಯದ ಬಾ|| ಇದರ ಬಡ್ಡೀ ಸಹ	
	ಜುಮ್ಲಾ . .	597—7—6			

ತಾರೀಖು 21ನೇ ಅಕ್ಟೋಬರ್ 1887.

ದಿವಾಳೀಯಾದ ಡಿಕ್ರೀ ದೇಣೇದಾರ ಬೆಂಗಳೂರು ಶಿದ್ದೀಕಟ್ಟೇಲಿರತಕ್ಕ ದಿವಾಣ ಆಫೀಸ್ ಜವಾನ ರಾಮನ ವಿಷಯದಲ್ಲಿ—

ಸ್ರ 1887ನೇ ಇಸವಿ ದಿವಾಳೀ ಕೇಸ್ ಮಿಸಲೇನಿಯಸ್ ನಂಬರ್ 527.

ಹುಕ್ಕುಂ.

ಮೇಲ್ಕಂಡ ರಾಮನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡಿ ಯವರಾದ ಮೆ|| ಸಿ. ಕ್ರೈಸ್ ಸಾಹೇಬರವರ ರೂಬರೂ ಅರ್ಜೀದಾರನಾದ ರಾಮನ ಪರವಾಗಿ ಮೆ|| ಅಡ್ವೊಕೇಟ್ ನರಸುಹ್ಮಯ್ಯಂಗಾರ್ರನ್ನೂ ಮತ್ತು ಸದರೀಯವನ ಲೇಣೇದಾರ್ರಾದವರ ತರಫ 1—2—3—4ನೇರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ,—

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ರಾಮನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ವತ್ತಿರಣಾಗಿಯಾಗಲೀ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರೀಯಿಂದ ಸಹ ಅವನ್ನನಿಖಾಲಸ್ ಮಾಡಲಾಗಿರುತ್ತೆಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ರ 1887ನೇ ಇಸವಿ ಅಕ್ಟೋಬರ್ 21ನೇ ತಾರೀಖಿನಲ್ಲಿ ಈ ಕೋರ್ಟು ಮೊಹರು ನಿಶಾ ನಮ್ಮ ದಸ್ತಖತ್ತೊಡನೇ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಸಾಲಬಾಬಿಗೆ.	ಯಾವಾಗ ದೇಣೇ ಹುಟ್ಟಿದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ.	ಷರಾ.
1	ಬೆಂಗಳೂರು ಮಹರಾಷ್ಟ್ರ ಬ್ಯಾಂಕಿಗೆ ..	166	1880	ಡಿಕ್ರೀ	
2	ಡಿಟೋ ಧನಾಭಿವೃದ್ಧೀ ಬ್ಯಾಂಕಿಗೆ ..	25 ರೂ.	..	ಡಿಟೋ	
3	ಡಿಟೋ ಜವಳಿ ಅಂಗಡಿ ಬೋರಂಣ ..	5	..	ಡಿಟೋ	
4	ಕಲಾಪಳ್ಯದ ಕೀಬಂಣಿಗೆ ..	20	..	ಮೂಬದಲೇ ಬಾಬತು	
	ಜುಮ್ಲಾ ..	216			

ದಿವಾಳೀಯಾದ ಡಿಕ್ರೀ ದೇಣೇದಾರ ಚಿಕ್ಕಬಳ್ಳಾಪುರದ ಕೋಟೇಲಿರುವ ಭೀಮರಾವಿನ ವಿಷಯದಲ್ಲಿ—

ಸ್ರ 1887ನೇ ಇಸವಿ ದಿವಾಳೀ ಕೇಸ್ ಮಿಸಲೇನಿಯಸ್ ನಂಬರ್ 550.

ಹುಕ್ಕುಂ.

ಮೇಲ್ಕಂಡ ಭೀಮರಾವು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜ್‌ರಾದ ಮೆ|| ಸಿ. ಕ್ರೈಸ್ ಸಾಹೆಬರವರ ರೂಬರೂ ಅರ್ಜೀದಾರನಾದ ಭೀಮರಾವು ಖುದ್ದಾಗಿಯೂ ಮತ್ತು ಸದರೀಯವನ ಲೇಣೇದಾರ್ರಾದ 1ನೇ ಯವರ ತರಫ್ ಪ್ಲೀಡರ್ ಗಂಗಾಧರಯ್ಯನವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ—2—3—4—5—6ನೇ ಯವರು.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಭೀಮರಾವು ಹೊಂದುವದಕ್ಕೆ ಹಕ್ಕು ದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನು ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ವತಂತ್ರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನು ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ರ್ 1887ನೇ ಇಸವಿ ಅಕ್ಟೋಬರ್ 1ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್ತಿನಿಸಿ ಕೊಡಲ್ಪಟ್ಟಿತು.

ಸೂಲದಪಟ್ಟಿ.

ನಂಬರ್.	ಲೇಣೇದಾರು ಅಥವಾ ದಾವಾದಾರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಹೊಣಲಗೆ.	ಯಾವಾಗ ದೇಣಿ ಕೊಟ್ಟದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇ ನಾದರೂ ಇದ್ದರೆ.	ಷರಾ.
1	ಚ್ಕಬಳ್ಳಾಪುರದಲ್ಲಿರುವ ದೇವಂಡಹಳ್ಳಿ ಬಸಪ್ಪರ ಚಿಕ್ಕಮುನಿಯಪ್ಪ	672 0 0	1885	ಡಿಕರೀ ಚಿಕ್ಕಬಳ್ಳಾಪುರದ ಮುನ್ಸಿಫ್ ಕೋರ್ಟು ಬಾಬತು ನಂಬರ 241.	
2	ಡಿಟೋ ಕನ್ನಪೆಟ್ಟೈಪ್ಪನವರ ಪುಟಂಣ ..	147 7 5	..	ಜಂದ್ರಪ್ಪಗೆ ಜಾಮೀನಾಗಿ ಕೊಡಿಸಿದ್ದು	
3	ಡಿಟೋ ಸ್ಟಾಂಪ್‌ವೆಂಡರ್ ಗೋವಿಂದಪ್ಪ ..	574 13 6	..	ಡಿಕ್ರೀ	
4	ಡಿಟೋ ಸುಬ್ರಹ್ಮಣ್ಯೇಶ್ವರ ಬ್ಯಾಂಕ್ ..	182 4 10	..	ಡಿಟೋ	
5	ಶಿಂಗೇರೀ ಕೊಪ್ಪದಲ್ಲಿ ಇರತಕ್ಕ ಇಂಜನಿಯರ್ ಇಲಾಖಾ ಓವರಸೀ ಸೂರ್ಯನಾರಾಯಣರಾವು ..	100 0 0	..	ಭೋಗ್ಯದಬಾಬತು	
6	ದೇವಂಡಪಳ್ಳಿ ತಾಲ್ಲೂಕು ಸರ್ವಮಾನ್ಯ ನಾರಾಯಣಪುರ ಪಟೇಲ್ ನಂಜೇಗೌಡಗೆ ..	50 0 0	..	ಡಿಟೋ	
	ಜುಮ್ಲಾ ..	1738 9 9			

ಸಿ. ಕೈಸ್,
ಸಬ್ ಜಡ್ಜ್.

ಫಾರೆಸ್ಟ್ ಇಲಾಖಾ.

ತಾರೀಖು 13ನೇ ಅಕ್ಟೋಬರ್ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ದರಖಾಸ್ತು ಮಂಜೂರಾದ ತಾರೀಖು ಲಾಗಾಯಿತು 1889ನೇ ಇಸವಿ ಮಾರ್ಚೀ ಆಖೈರ್‌ವರಿಗೆ ಮೈಸೂರು ಡಿಸ್ಟ್ರಿಕ್ಟ್ ಹುಣಸೂರು ತಾಲ್ಲೂಕು ಬಾಬತು ಈ ಕೆಳಗೆ ನಮೂದಾಗುವ ಜಂಗಲ್‌ಗಳಿಂದ ಹುಣಸೂರ ಡಿಪೋಕ್ಕೆ ಚಿಲ್ಲರೇ ಚೌಬೀನೇ ಮತ್ತು ಗಳೂ ಸಹ ಹೇರಲು ಇಷ್ಟವುಳ್ಳವರು 1887ನೇ ಇಸವಿ ನವಂಬರ್ 15ನೇ ತಾರೀಖುವರಿಗೆ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಸೂಪರ್‌ಟೆಂಡೆಂಟ್ ಸಾಹೇಬರವರ ಆಫೀಸಿಗೆ ದರಖಾಸ್ತು ಮಾಡಬಹುದು.

ದರಖಾಸ್ತುದಾರ ತಾನು ಗಾಡೀ ಜೋಜಾ 1ಕ್ಕೆ ಯಾವ ದರದಂತೆ ಚಿಲ್ಲರೇ ಚೌಬೀನಾ ಮತ್ತು ಬಿದರುಗಳು ಹೇರಲು ಒಪ್ಪುತ್ತಾನೋ ಆ ದರವನ್ನ ದರಖಾಸ್ತಿನಲ್ಲಿ ನಮೂದಿಸಬೇಕು.

1 ವೀರನ ಹೊಸಹಳ್ಳಿ ಜಂಗಲ್
2 ಕಬಿನಹಳ್ಳಿ ಡಿಟೋ
3 ಆನೆಚವಕೂರು ಡಿಟೋ
4 ಬಾಣಾರೇ ಜಂಗಲ್
5 ಮಾವಕಲ್ ಡಿಟೋ

ಟಿ. ಆನಂದರಾವ್,
ಡೆಪ್ಯುಟಿ ಕಮ್ಮಿಷನರ್.